## ಮಧ್ಯಂತರ ಅರ್ಜಿಯ ಮೇಲೆ ಆದೇಶ

ಅರ್ಜಿದಾರರು ಮುಖ್ಯ ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 125 ರಡಿಯಲ್ಲಿ ಎದುರುದಾರರ ವಿರುದ್ಧ ಸಲ್ಲಿಸಿ, ಜೀವನಾಂಶವನ್ನು ಕೋರಿರುತ್ತಾರೆ. ಸದರಿ ಅರ್ಜಿಯೊಂದಿಗೆ ಅರ್ಜಿದಾರರು ಪ್ರಸ್ತುತ ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 125(1) ರಡಿಯಲ್ಲಿ ಎದುರುದಾರರ ವಿರುದ್ಧ ಸಲ್ಲಿಸಿ, ಮಧ್ಯಂತರ ಜೀವನಾಂಶವನ್ನು ಕೋರಿರುತ್ತಾರೆ.

2. ಪ್ರಸ್ತುತ ಅರ್ಜಿಯ ಸಾರಾಂಶ ಏನೆಂದರೆಃ-

ಮುಖ್ಯ ಅರ್ಜಿಯಲ್ಲಿನ 1ನೇ ಅರ್ಜಿದಾರರರು ಮತ್ತು ಎದುರುದಾರನ ವಿವಾಹವು ದಿನಾಂಕಃ 04-03-2013 ರಂದು ನಡೆದಿರುತ್ತದೆ. ಅವರಿಬ್ಬರ ದಾಂಪತ್ಯದ ಫಲವಾಗಿ 2ನೇ ಅರ್ಜಿದಾರರು ಜನಿಸಿರುತ್ತಾರೆ. ಎದುರುದಾರನು ಅರ್ಜಿದಾರರಿಗೆ ಹಿಂಸೆ ನೀಡುತ್ತಾ, ಅರ್ಜಿದಾರರಿಗೆ ಊಟಾ-ಬಟ್ಟೆಗೆ ತೊಂದರೆ ನೀಡುತ್ತಿರುತ್ತಾರೆ. ಈ ಬಗ್ಗೆ ರಾಜಿ ಪಂಚಾಯಿತಿ ಮಾಡಿ, ರಾಜಿ ಸಂಧಾನ ಮಾಡಿದರೂ ಸಹ ಯಾರ ಮಾತಿಗೂ ಬೆಲೆ ಕೊಡದೇ ಅರ್ಜಿದಾರರನ್ನು ತಿರಸ್ಕರಿಸಿರುತ್ತಾರೆ. ಅಲ್ಲದೇ ಎದುರುದಾರನಿಗೆ ಚಾಲಕ ವೃತ್ತಿಯಿಂದ ಹಾಗೂ ಪ್ರಾವಿಜನ್ ಸ್ಟೋರ್ ಅಂಗಡಿಯಿಂದ ತಿಂಳಿಗೆ ರೂ.50,000-00ಗಳ ಆದಾಯ ಇರುತ್ತದೆ. ಅಲ್ಲದೇ ಅರ್ಜಿದಾರರಿಗೆ ಯಾವುದೇ ಆದಾಯ ಮೂಲಗಳು ಇಲ್ಲದೇ ಜೀವನ ಸಾಗಿಸುವುದು ಕಷ್ಟಕರವಾಗಿರುತ್ತದೆ ಆದ್ದರಿಂದ ಅರ್ಜಿದಾರರು ಎದುರುದಾರರ ವಿರುದ್ಧ ಜೀವನಾಂಶ ಕೋರಿ ಮುಖ್ಯ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯೊಂದಿಗೆ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ತಿಂಗಳಿಗೆ ರೂ.12,500-00 ಗಳ ಮಧ್ಯಂತರ ಜೀವನಾಂಶವನ್ನು ಅರ್ಜಿದಾರರಿಗೆ ನೀಡಬೇಕಾಗಿ ಕೋರಿರುತ್ತಾರೆ.

3. ಅರ್ಜಿದಾರರು ದಾಖಲಿಸಿದ ಅರ್ಜಿಯನ್ನು ನೊಂದಾಯಿಸಿಕೊಂಡು ಎದುರುದಾರನು ಹಾಜರಾತಿ ಕೋರಿ ತಿಳುವಳಿಕೆ ನೀಡಿದ್ದು, ಅದಕ್ಕೆ ಪ್ರತಿಯಾಗಿ ಎದುರುದಾರನು ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಸಹ ಅರ್ಜಿದಾರರು ತನ್ನ ಅರ್ಜಿಯಲ್ಲಿ ಹೇಳಿರುವ ಅಂಶವನ್ನು ಅಲ್ಲಗೆಳೆಯಲು ತಮ್ಮ ಯಾವುದೇ ರೀತಿಯ ತಕರಾರನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಎದುರುದಾರರ ಪರವಾಗಿ ತಕರಾರು ಇಲ್ಲವೆಂದು ನ್ಯಾಯಾಲಯವು ಪರಿಗಣಿಸಿರುತ್ತದೆ.

4. ಈ ಅರ್ಜಿಯ ವಿಷಯಗಳು ಜೊತೆಗೆ ಲಭ್ಯವಿರುವ ದಾಖಲೆಗಳನ್ವಯ ಈ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಉದ್ಭವವಾಗುತ್ತವೆಃ-

1. ಎದುರುದಾರನು ಸಾಕಷ್ಟು ಆದಾಯವನ್ನು ಹೊಂದಿದ್ದರೂ ಸಹ ಅರ್ಜಿದಾರಳ ಜೀವನ ನಿರ್ವಹಣೆಯನ್ನು ನೋಡಿಕೊಳ್ಳದೇ ಮತ್ತು ಅವಳಿಗೆ ಜೀವನಾಂಶವನ್ನು ನೀಡದೇ ನಿರ್ಲಕ್ಷಿಸಿರುವನೇ ಎಂಬುದನ್ನು ಅರ್ಜಿದಾರಳು ಮೇಲ್ನೋಟಕ್ಕೆ ತೋರಿಸುತ್ತಾರೆಯೇ ?

2. ಅರ್ಜಿಯಲ್ಲಿ ಕೇಳಿರುವಂತೆ ಅರ್ಜಿದಾರರು ಮಾಸಿಕ 12,500-00 ರೂ. ಗಳ ಮಧ್ಯಂತರ ಜೀವನಾಂಶ ಪಡೆಯಲು ಅರ್ಹರಿರುವರೇ?

3. ಯಾವ ಆದೇಶ ?

5. ಮೇಲ್ಕಂಡ ಅಂಶಗಳಿಗೆ ನಾನು ಈ ಕೆಳಕಂಡಂತೆ ನಿರ್ಣಯಿಸಿರುತ್ತೇನೆಃ-

| | | |
|---|---|---|
| ಅಂಶ-1 | ಃ- | ಸಕಾರಾತ್ಮಕವಾಗಿ |
| ಅಂಶ-2 | ಃ- | ಭಾಗಶಃ ಸಕಾರಾತ್ಮಕವಾಗಿ |
| ಅಂಶ-3 | ಃ- | ಅಂತಿಮ ಆದೇಶದಂತೆ |

ಈ ಕೆಳಕಂಡ ಕಾರಣಗಳಿಗಾಗಿ ಃ-

ಃಕಾರಣಗಳುಃ

6. ಅಂಶ ಸಂಖ್ಯೆಃ1 ಮತ್ತು 2ಃ- ಎರಡೂ ಅಂಶಗಳು ಒಂದಕ್ಕೊಂದು ಸಂಬಂಧಿಸಿರುವುದರಿಂದ ವಿಷಯಗಳ ಪುನರಾವರ್ತನೆ ತಪ್ಪಿಸಲು ಅವುಗಳನ್ನು ಒಟ್ಟಿಗೆ ಚರ್ಚೆಗೆ ಪರಿಗಣಿಸಿದೆ.

7. 1ನೇ ಅರ್ಜಿದಾರರು ಮತ್ತು ಎದುರುದಾರನ ನಡುವೆ ವಿವಾಹ ಆದ ಬಗ್ಗೆ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ತಿಳಿಸಿರುತ್ತಾರೆ. ಸದರಿ 1ನೇ ಅರ್ಜಿದಾರಳು ಎದುರುದಾರನ ಪತ್ನಿ ಎನ್ನುವುದಕ್ಕೆ ಸಂಬಂಧಿಸಿದಂತೆ 1ನೇ ಅರ್ಜಿದಾರಳು ಒಂದು ಫೋಟೋವನ್ನು ಹಾಗೂ ಮದುವೆಯ ಆಮಂತ್ರಣ ಪತ್ರಿಕೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, 1ನೇ ಅರ್ಜಿದಾರರು ಮತ್ತು ಎದುರುದಾರರ ನಡುವೆ ವಿವಾಹ ಆದ ಬಗ್ಗೆ ಸದರಿ ದಾಖಲೆಯಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಅದೇ ರೀತಿ 1ನೇ ಅರ್ಜಿದಾರರು ಮತ್ತು ಎದುರುದಾರರ ನಡುವೆ ಆದ ವಿವಾಹದ ಫಲವಾಗಿ 2ನೇ ಅರ್ಜಿದಾರರು ಜನಿಸಿರುತ್ತಾರೆ. ಪ್ರಸ್ತುತ 2ನೇ ಅರ್ಜಿದಾರರಿಗೆ 06 ವರ್ಷಗಳಾಗಿದ್ದು, ಅಪ್ರಾಪ್ತ ವಯಸ್ಕರಾಗಿರುತ್ತಾರೆ. ಹೀಗಿರುವಾಗ ಎದುರುದಾರನು ಅರ್ಜಿದಾರರಿಗೆ ಹಿಂಸೆ ನೀಡುತ್ತಾ, ಅರ್ಜಿದಾರರಿಗೆ ಊಟಾ-ಬಟ್ಟೆಗೆ

ತೊಂದರೆ ನೀಡುತ್ತಿರುತ್ತಾರೆ. ಈ ಬಗ್ಗೆ ರಾಜಿ ಪಂಚಾಯಿತಿ ಮಾಡಿ, ರಾಜಿ ಸಂಧಾನ ಮಾಡಿದರೂ ಸಹ ಯಾರ ಮಾತಿಗೂ ಬೆಲೆ ಕೊಡದೇ ಅರ್ಜಿದಾರರನ್ನು ತಿರಸ್ಕರಿಸಿರುತ್ತಾರೆ. ಅಲ್ಲದೇ ಎದುರುದಾರನಿಗೆ ಚಾಲಕ ವೃತ್ತಿಯಿಂದ ಹಾಗೂ ಪ್ರಾವಿಜನ್ ಸ್ಟೋರ್ ಅಂಗಡಿಯಿಂದ ತಿಂಳಿಗೆ ರೂ.50,000-00ಗಳ ಆದಾಯ ಇರುತ್ತದೆ. ಅಲ್ಲದೇ ಅರ್ಜಿದಾರರಿಗೆ ಯಾವುದೇ ಆದಾಯ ಮೂಲಗಳು ಇಲ್ಲದೇ ಜೀವನ ಸಾಗಿಸುವುದು ಕಷ್ಟಕರವಾಗಿರುತ್ತದೆ ಆದ್ದರಿಂದ ಅರ್ಜಿದಾರರು ಎದುರುದಾರರ ವಿರುದ್ಧ ಜೀವನಾಂಶ ಕೋರಿ ಮುಖ್ಯ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯೊಂದಿಗೆ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ತಿಂಗಳಿಗೆ ರೂ.12,500-00 ಗಳ ಮಧ್ಯಂತರ ಜೀವನಾಂಶವನ್ನು ಅರ್ಜಿದಾರರಿಗೆ ನೀಡಬೇಕಾಗಿ ಕೋರಿರುತ್ತಾರೆ. ಆದರೆ ಸದರಿ ಅರ್ಜಿಯಲ್ಲಿನ ಅಂಶಗಳನ್ನು ಅಲ್ಲಗೆಳೆಯುವ ಸಲುವಾಗಿ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಿದ್ದು, ಅದಕ್ಕೆ ಪ್ರತಿಯಾಗಿ ಎದುರುದಾರನು ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಸಹ ಅರ್ಜಿದಾರರು ತನ್ನ ಅರ್ಜಿಯಲ್ಲಿ ಹೇಳಿರುವ ಅಂಶವನ್ನು ಅಲ್ಲಗೆಳೆಯಲು ತಮ್ಮ ಯಾವುದೇ ರೀತಿಯ ತಕರಾರನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಎದುರುದಾರರ ಪರವಾಗಿ ತಕರಾರು ಇಲ್ಲವೆಂದು ನ್ಯಾಯಾಲಯವು ಪರಿಗಣಿಸಿರುತ್ತದೆ.

8. ಈಗಾಗಲೇ ಹೇಳಿದಂತೆ 1ನೇ ಅರ್ಜಿದಾರರು ಎದುರುದಾರರ ಕಾನೂನುಬದ್ಧ ಪತ್ನಿ ಎನ್ನುವುದಕ್ಕೆ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಿರುತ್ತಾರೆ. ವಿವಾಹದ ಫಲವಾಗಿ 2ನೇ ಅರ್ಜಿದಾರರು ಜನಿಸಿರುತ್ತಾರೆ. ಅಲ್ಲದೇ ಅರ್ಜಿದಾರರನ್ನು ಸಾಕಿ-ಸಲಹುವ ಜವಾಬ್ದಾರಿಯಿಂದ ಅರ್ಜಿದಾರರನ್ನು ನಿರ್ಲಕ್ಷಿಸಿದ ಬಗ್ಗೆ ಅರ್ಜಿದಾರರು ತನ್ನ ಅರ್ಜಿಯಲ್ಲಿ ಹೇಳಿದ್ದು, ಆದರೆ ಅದಕ್ಕೆ ಎದುರುದಾರರ ಕಡೆಯಿಂದ ಯಾವುದೇ ಪ್ರತಿರೋಧ ಇರುವುದಿಲ್ಲ. ಅರ್ಜಿದಾರರಿಗೆ ಈಗ ಯಾವುದೇ ಆದಾಯ ಇರುವುದಿಲ್ಲ. ಅಲ್ಲದೇ 2 ಮತ್ತು 2ನೇ ಅರ್ಜಿದಾರರು ಅಪ್ರಾಪ್ತ ವಯಸ್ಕರಾಗಿರುವುದರಿಂದ ಅವರನ್ನು ನೋಡಿಕೊಳ್ಳುವ ಜವಾಬ್ದಾರಿ 1ನೇ ಅರ್ಜಿದಾರರ ಮೇಲೆ ಇರುತ್ತದೆ. ಯಾವುದೇ ಆದಾಯ ಇಲ್ಲದೇ ಅಪ್ರಾಪ್ತ ಮಕ್ಕಳನ್ನು ನೋಡಿಕೊಳ್ಳಲು 1ನೇ ಅರ್ಜಿದಾರರಿಗೆ ಸಾಕಷ್ಟು ಆದಾಯ ಇರುವುದಿಲ್ಲ, ಆದ್ದರಿಂದ 1ನೇ ಅರ್ಜಿದಾರರು, 2ನೇ ಅರ್ಜಿದಾರರನ್ನು ಯಾವುದೇ ಆದಾಯ ಇಲ್ಲದೇ ನೋಡಿಕೊಳ್ಳಲು ಕಷ್ಟವಾಗುತ್ತದೆ. ಅರ್ಜಿದಾರರು ಹೇಳಿದ ಹಾಗೇ ಎದುರುದಾರನಿಗೆ ಸಾಕಷ್ಟು ಆದಾಯ ಇದೇ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದರೆ ಅರ್ಜಿದಾರರನ್ನು ಸಾಕಿ-ಸಲಹುವ ಜವಾಬ್ದಾರಿ 1ನೇ ಅರ್ಜಿದಾರರ ಗಂಡನಾದ ಮತ್ತು 2ನೇ ಅರ್ಜಿದಾರರ ತಂದೆಯಾದ ಎದುರುದಾರರ ಕರ್ತವ್ಯವಾಗಿರುತ್ತದೆ. ಆದ್ದರಿಂದ ಅರ್ಜಿದಾರರಿಗೆ ಮಾಸಿಕ ತಲಾ ರೂ.1,000-00 ಗಳನ್ನು ಪಾವತಿಸುವಂತೆ ಎದುರುದಾರರರಿಗೆ ಆದೇಶ ಮಾಡಿದ್ದಲ್ಲಿ ಅರ್ಜಿದಾರರಿಗಾಗಲೀ ಮತ್ತು ಎದುರುದಾರರಿಗಾಗಲೀ ಯಾವುದೇ ತೊಂದರೆ ಆಗುವುದಿಲ್ಲ. ಆದ್ದರಿಂದ ಈ ಅರ್ಜಿಯನ್ನು

ಪುರಸ್ಕರಿಸಲು ಸಾಕಷ್ಟು ಕಾರಣಗಳು ಇರುತ್ತದೆ. ಪ್ರಯುಕ್ತ ಎದುರುದಾರರಿಂದ ಅರ್ಜಿದಾರರು ತಲಾ ರೂ.1,000-00ಗಳ ಜೀವನಾಂಶ ಪಡೆಯಲು ಅರ್ಹರಾಗಿರುತ್ತಾರೆ. ಆದ್ದರಿಂದ , ಒಂದನೇ ಅಂಶವನ್ನು "ಭಾಗಶಃ ಸಕಾರಾತ್ಮಕ" ವಾಗಿ ಉತ್ತರಿಸಿರುತ್ತೇನೆ.

ಅಂಶ ಸಂಖ್ಯೆ:2:-

9. ಮೇಲ್ಕಂಡ ಅಂಶ ಸಂಖ್ಯೆ:1 ರಲ್ಲಿ ನೀಡಿರುವ ಕಾರಣಗಳ ಮೇಲೆ ಈ ಕೆಳಕಂಡಂತೆ ಆದೇಶಸುತ್ತೇನೆ:-

:: ಆದೇಶ ::

ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ. 125(1) ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ಭಾಗಶಃ ಪುರಸ್ಕರಿಸಿದೆ.

ಎದುರುದಾರನು, ಸದರಿ ಅರ್ಜಿ ದಾಖಲಿಸಿದ ದಿನಾಂಕದಿಂದ ಮುಖ್ಯ ಅರ್ಜಿ ತೀರ್ಮಾನವಾಗುವವರೆಗೆ ಅರ್ಜಿದಾರರಿಗೆ ಪ್ರತಿ ತಿಂಗಳು ತಲಾ ರೂ.1,000/-(ಒಂದು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಮಧ್ಯಂತರ ಜೀವನಾಂಶ ಹಣವನ್ನು ನೀಡತಕ್ಕದ್ದು.

(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು ಬೆರಳಚ್ಚುಪಡಿಸಿದ ನಂತರ ತಿದ್ದುಪಡಿಯನ್ನು ಮಾಡಿ ಬಳಿಕ ತೆರೆದ ನ್ಯಾಯಾಲಯದಲ್ಲಿ ದಿನಾಂಕ: 07 ನೇ ಏಪ್ರಿಲ್ ಮಾಹೆ 2021 ರಂದು ಘೋಷಿಸಲಾಯಿತು)

(ನಾಗೇಶ ಸಿ.)
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಬೇಲೂರು

**ಃಪ್ರತ್ಯೇಕ ಪ್ರತಿಯ ತೀರ್ಪಿನ ಆದೇಶದ ಭಾಗವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತುಃ**

**ಃಆದೇಶದ ಭಾಗಃ**

**ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ. 125(1) ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಯನ್ನು ಭಾಗಶಃ ಪುರಸ್ಕರಿಸಿದೆ.**

**ಎದುರುದಾರನು, ಸದರಿ ಅರ್ಜಿ ದಾಖಲಿಸಿದ ದಿನಾಂಕದಿಂದ ಮುಖ್ಯ ಅರ್ಜಿ ತೀರ್ಮಾನವಾಗುವವರೆಗೆ ಅರ್ಜಿದಾರರಿಗೆ ಪ್ರತಿ ತಿಂಗಳು ತಲಾ ರೂ.1,000/-(ಒಂದು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಮಧ್ಯಂತರ ಜೀವನಾಂಶ ಹಣವನ್ನು ನೀಡತಕ್ಕದ್ದು.**

**ಜೆಎಂಎಫ್‌ಸಿ-ಬೇಲೂರು**